**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

**ಸಿ.ಸಿ ನಂಃ 551/2020**

| | | |
|---|---|---|
| ಸಾಕ್ಷಿಯ ಹೆಸರುಃ | ಮಲ್ಲಿಕಾರ್ಜುನ | ಪ್ರಾಸಾಃ 6 |
| ತಂದೆಯ ಹೆಸರುಃ | ಸಹದೇವ | ಚಾಸಾಃ 5 |
| ವಯಸ್ಸುಃ | 25 ವರ್ಷ | ದಿಃ 16-11-2023 |
| ಉದ್ಯೋಗಃ | ಖಾಸಗಿ ಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ರಾಮಸಮುದ್ರ | |

**ಮುಖ್ಯ ವಿಚಾರಣೆ ಮಾನ್ಯ ನುರಿತ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ**

1. ನನಗೆ ಚಾಸಾಃ 1 ನನ್ನ ತಾಯಿ, ಚಾಸಾಃ 4 ನನ್ನ ತಂದೆ, ಚಾಸಾಃ 6 ನನ್ನ ಸಹೋದರ. ನನಗೆ ಚಾಸಾಃ 7 ರಿಂದ 9 ರವರ ಪರಿಚಯವಿದೆ. ನನಗೆ ಆರೋಪಿತರ ಪರಿಚಯವಿದೆ. ದಿನಾಂಕಃ 02-09-2020 ರಂದು ರಾತ್ರಿ 8.00 ಗಂಟೆ ಸುಮಾರಿಗೆ ಮೋರಿ ಸಲುವಾಗಿ ನನ್ನ ತಂದೆ ಮತ್ತು 1 ನೇ ಆರೋಪಿತನ ನಡುವೆ ಬಾಯಿ ಮಾತಿನಲ್ಲಿ ಜಗಳವಾಗಿರುತ್ತದೆ. ನಾನು ಆ ದಿನ ರಾತ್ರಿ ಕೆಲಸಕ್ಕೆ ಹೋಗಿ ಮುಂಜಾನೆ 7.00 ಗಂಟೆಗೆ ಬಂದಿರುವಾಗ ನಾನು, ಚಾಸಾಃ 1, ಚಾಸಾಃ 4, ಚಾಸಾಃ 6 ರವರು ಮಾತನಾಡುತ್ತಾ ಕುಳಿತಿರುವಾಗ ಆವಾಗ ಆರೋಪಿತರು ಎಲ್ಲರೂ ಹಕಾರೆ ಹೊಡೆಯುತ್ತಾ ಬಂದು ಮನೆ ಮುಂದೆ ಯಾಕೆ ನೀರು ಬಿಡುತ್ತಿಯಾ ಎಂದು ಕೇಳಿ ನಮಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಆಗ ಚಾಸಾಃ 4 ರವರು ಮುಂಚೆಯಿಂದಲೂ ಅಲ್ಲಿಯೇ ನೀರು ಬಿಡುತ್ತೇವೆ ಈಗೇನು ಹೊಸದಾ ಎಂದು ಕೇಳಿದಾಗ 1 ನೇ ಆರೋಪಿತನು ನನ್ನ ತಂದೆಗೆ ಅವಾಚ್ಯ ಶಬ್ದಗಳಿಂದ ಬೈದು, ಕಲ್ಲಿನಿಂದ ಎದೆಗೆ ಗುದ್ದಿರುತ್ತಾನೆ. ನಾನು ಆ ಸಮಯದಲ್ಲಿ ಜಗಳವನ್ನು ಬಿಡಿಸಲು ಹೋದಾಗ 1, 2, 8, 10, 12 ನೇ ಆರೋಪಿತರು ಬಡಿಗೆಯಿಂದ ಕೈಗೆ, ರಟ್ಟೆಗೆ, ಕಾಲಿಗೆ ಮತ್ತು ಬೆನ್ನಿಗೆ ಹೊಡೆದಿರುತ್ತಾರೆ.

2. ಚಾಸಾಃ 6 ರವರು ಜಗಳವನ್ನು ಬಿಡಿಸಲು ಬಂದಾಗ 5, 8, 11 ನೇ ಆರೋಪಿತರು ಚಾಸಾಃ 6 ರವರಿಗೆ ಬಡಿಗೆಯಿಂದ ಕೈಗೆ ಮತ್ತು ಕಾಲಿಗೆ ಹೊಡೆದಿರುತ್ತಾರೆ. ಎಲ್ಲಾ ಆರೋಪಿತರು ಸೇರಿ ನನಗೆ, ಚಾಸಾಃ 4, 6 ರವರಿಗೆ ಕೈಯಿಂದ, ಕಾಲಿನಿಂದ ಒದ್ದಿರುತ್ತಾರೆ. ಆ ಸಮಯದಲ್ಲಿ ಚಾಸಾಃ 1 ರವರು ಬಂದಾಗ 6 ಮತ್ತು 7 ನೇ ಆರೋಪಿತರು ಚಾಸಾಃ 1 ರವರಿಗೆ ಕೈಯಿಂದ ಹೊಡೆದಿರುತ್ತಾರೆ. ಆಗ ಆ

ಸಂದರ್ಭದಲ್ಲಿ ಚಸಾಃ 7 ರಿಂದ 9 ರವರು ಜಗಳವನ್ನು ಬಿಡಿಸಿರುತ್ತಾರೆ. ಆರೋಪಿತರು ಹೋಗುವಾಗ ನಮಗೆ ಜೀವ ಬೆದರಿಕೆ ಹಾಕಿರುತ್ತಾರೆ. ನಮಗೆ ಗಾಯವಾಗಿದ್ದರಿಂದ ನಾವು ಸರಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದಿರುತ್ತೇವೆ. ನಾನು ಮು. ಮಾ. ಗಳನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟಿ ಸವಾಲು ಃಆರೋಪಿತರ ಪರ ಶ್ರೀ. ಎಸ್. ಬಿ. ಎಚ್. ವಕೀಲರಿಂದ**

1. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸವನ್ನು ಮಾಡಿರುತ್ತೇನೆ. ಸದರಿ ಆರೋಪಿತರು ನಮ್ಮ ಸಂಬಂಧಿಕರು ಎಂದರೆ ಸಾಕ್ಷಿಯು ನಮ್ಮ ದೊಡ್ಡಪ್ಪನ ಮಗಳನ್ನು ಮದುವೆಯಾಗಿರುತ್ತಾನೆ ಎಂದು ನುಡಿಯುತ್ತಾರೆ. ಆರೋಪಿತರು ಮತ್ತು ನಮ್ಮ ನಡುವೆ ವೈ ಮನಸ್ಸು ಇದೆ ಎಂದರೆ ಸರಿಯಲ್ಲ. ದೂರನ್ನು ನೀಡಲು ಚಾಸಾಃ 1 ರವರು ಹೋಗಿರುತ್ತಾರೆ. ಚಾಸಾಃ 1 ರವರು ದೂರನ್ನು ನೀಡಿದಾಗ ಎಷ್ಟು ಗಂಟೆಯಾಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ದಿನಾಂಕಃ 03.09.2020 ರಂದು ಚಾಸಾಃ 1 ರವರು ದೂರನ್ನು ನೀಡಿರುತ್ತಾರೆ.

2. ಘಟನೆಯಾದ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ರಾಮಸಮುದ್ರದ ಅಧ್ಯಕ್ಷರು 6 ನೇ ಆರೋಪಿತಳು ಇದ್ದಳು. ಜಗಳವಾದ ಸಂದರ್ಭದಲ್ಲಿ 20 ರಿಂದ 30 ಜನರು ಸೇರಿದ್ದರು. ಸದರಿ ನನ್ನ ತಂದೆಗೆ ನಾವು 4 ಜನ ಗಂಡು ಮಕ್ಕಳು ಇರುತ್ತೇವೆ. ನನ್ನ ತಂದೆಗೆ ಒಬ್ಬಳೇ ಸಹೋದರಿ ಇರುತ್ತಾಳೆ ಆದರೆ ಅವಳು ಮರಣ ಹೊಂದಿರುತ್ತಾಳೆ. ನನ್ನ ತಂದೆಯ ಸಹೋದರಿಯ ಹೆಸರು ಶಾಂತಮ್ಮ. 2 ನೇ ಆರೋಪಿತನು ಪ್ರೇಮ ವಿವಾಹ ಆಗಿರುತ್ತಾನೆ ಎಂದರೆ ಸರಿ. 2 ನೇ ಆರೋಪಿತನು ಬಂಗಾರಮ್ಮನ ಮಗಳು ನಿರ್ಮಲಾ ಇವಳನ್ನು ಮದುವೆಯಾಗಿರುತ್ತಾನೆ ಎಂದರೆ ಸರಿ.

3. 1 ನೇ ಆರೋಪಿತನಿಗೆ ವಯಸ್ಸಾಗಿರುತ್ತದೆ ಎಂದರೆ ಸರಿ. 1 ನೇ ಆರೋಪಿತನಿಗೆ ವಯಸ್ಸಾಗಿದ್ದರಿಂದ ಕಟ್ಟಿಗೆಯಿಂದ ಹೊಡೆಯಲು ಬರುವುದಿಲ್ಲ ಎಂದರೆ ಸಾಕ್ಷಿಯು ನಾನು ಕಣ್ಣಾರೆ ಹೊಡೆದಿದ್ದನ್ನು ನೋಡಿರುತ್ತೇನೆ ಎಂದು ನುಡಿಯುತ್ತಾರೆ. 1 ರಿಂದ 7 ನೇ ಆರೊಪಿತರು ಒಂದೇ ಕುಟುಂಬದವರು ಎಂದರೆ ಸರಿ. ಸದರಿ 8 ರಿಂದ 14 ನೇ ಆರೋಪಿತರು ಇವರು 1 ರಿಂದ 7 ನೇ ಆರೋಪಿತರ ಸಂಬಂಧಿಕರು ಎಂದರೆ ಸರಿ. ಸದರಿ 1 ರಿಂದ 12 ನೇ ಆರೋಪಿತರ ಮನೆ ನಮ್ಮ ಮನೆಯಿಂದ ದೂರ ಇದೆ ಎಂದರೆ ಸರಿಯಲ್ಲ. ಸದರಿ 13 ಮತ್ತು 14 ನೇ ಆರೋಪಿತರ ಮನೆ ನಮ್ಮ ಮನೆಯಿಂದ ದೂರ ಇದೆ ಎಂದರೆ ಸರಿಯಲ್ಲ. 2 ನೇ ಆರೋಪಿತನ ಮತ್ತು ನಿರ್ಮಲಾ ಇವರ ಮದುವೆ ಸನಃ 2008 ರಲ್ಲಿ ಆಗಿರುತ್ತದೆ ಎಂದರೆ ಸರಿ. ಸದರಿ ಕಟ್ಟಿಗೆ ಎಷ್ಟು ಫೀಟು ಇತ್ತು ಎಂದರೆ

ನಾಲ್ಕುವರೆ ಫೀಟು ಇತ್ತು ಎಂದು ನುಡಿಯುತ್ತಾರೆ. ಸದರಿ ಆರೋಪಿತರು ಹೊಡೆದಿರುವ ಕಲ್ಲು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ.

4. 1 ನೇ ಆರೋಪಿತನು ಕಲ್ಲಿನಿಂದ ನನ್ನ ತಂದೆಗೆ ಹೊಡೆದಿರುತ್ತಾನೆ. ದೂರನ್ನು ನನ್ನ ತಾಯಿ ಬರೆದಿರುತ್ತಾಳೆ. ನನ್ನ ತಾಯಿ ಆಶಾ ಕಾರ್ಯಕರ್ತೆ ಎಂದರೆ ಸರಿ. ಸದರಿ ಸಿ.ಸಿ ರೋಡ ಅಕ-ಕ್ಕದಲ್ಲಿ ಚರಂಡಿ ಇದೆ ಎಂದರೆ ಸಾಕ್ಷಿಯು ನಮ್ಮ ಮನೆಯ ಮುಂದೆ ಚರಂಡಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಚರಂಡಿಯನ್ನು ಮುಚ್ಚಿ ಅದರ ಮೇಲೆ ಕಟ್ಟಡ ಕಟ್ಟಿರುತ್ತೇವೆ ಎಂದರೆ ಸರಿಯಲ್ಲ.

5. ರಾಮಸಮುದ್ರದಿಂದ ಯಾದಗಿರಿ ಪೋಲಿಸ ಠಾಣೆಗೆ ಬರಲು 20 ನಿಮಿಷಗಳ ಕಾಲಾವಾಕಾಶ ಬೇಕು. ಆರೋಪಿತರ ಮತ್ತು ನಮ್ಮ ನಡುವೆ ಯಾವುದೇ ಜಗಳವಾಗದೇ ಇದ್ದರೂ ಕೂಡ ಸುಳ್ಳು ದೂರನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. 2 ನೇ ಆರೋಪಿತನು ಮತ್ತು ನಿರ್ಮಲಾ ಇವರು ಪ್ರೇಮ ವಿವಾಹ ಆಗಿದ್ದರಿಂದ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಮೋರಿ ನೀರನ್ನು 1 ನೇ ಆರೋಪಿತನು ತಡೆಹಿಡಿದಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ರಾತ್ರಿ 8.00 ಗಂಟೆಗೆ ನಮಗೆ ಮತ್ತು ಆರೋಪಿತರ ನಡುವೆ ಜಗಳವಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೊಪಿತರು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೊಪಿತರು ನನಗೆ, ನನ್ನ ತಂದೆಗೆ ಮತ್ತು ಸಹೋದರಿನಿಗೆ ಕೈಯಿಂದ ಮತ್ತು ಕಾಲಿನಿಂದ ಒದ್ದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೊಪಿತರು ಜೀವ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇರುವುದಿಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಜೆಎಂಎಫ್‌ಸಿ ನ್ಯಾಯಾಧೀಶರು**
**ಯಾದಗಿರಿ**